ದಿನಾಂಕ 02.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಎಜಿಪಿಯವರಿಂದ:**

ದಾವಾ ಆಸ್ತಿಯಲ್ಲಿರುವ ಶೆಡ್ಡಗಳು ನಮಗೆ ಸಂಬಂಧಿಸಿರುವ ಕುರಿತು ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಕುರಿತು ಯಾವುದೇ ದಾವಾ ಮನವಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಶೆಡ್ಡಗಳು ಸರ್ಕಾರಿ ಜಾಗದಲ್ಲಿ ಇರುವ ಕುರಿತು 11 ಪ್ರತಿವಾದಿ ದೃಡೀಕರಣ ಪತ್ರ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಶೆಡ್ಗಳು ನನ್ನ ಸ್ವಂತ ಜಾಗದಲ್ಲಿ ಇರುವುದಾಗಿ ನುಡಿಯುತ್ತಾರೆ. 11 ನೇ ಪ್ರತಿವಾದಿಯು 7 ಮತ್ತು 10 ನೇ ಪ್ರತಿವಾದಿಗೆ ವಿದ್ಯುತ್ ಸಂಪರ್ಕ ನೀಡಲು ಎನ್ ಓ ಸಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

**2.** ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣದಲ್ಲಿ 19 ಗುಂಟೆ ಆಸ್ತಿಯನ್ನು ಸರ್ಕಾರಕ್ಕೆ ಖರೀದಿ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಖರೀದಿ ಪತ್ರದ ಪೂರ್ವದಲ್ಲಿ 7 ಮತ್ತು 10 ನೇ ಪ್ರತಿವಾದಿಗೆ 11 ಪ್ರತಿವಾದಿಯು ವಿದ್ಯುತ್ ಸಂಪರ್ಕ ನೀಡಲು ಎನ್ ಓ ಸಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಗೆ 2021 ರಲ್ಲಿ ತಕರಾರನ್ನು ಸಲ್ಲಿಸಿರುತ್ತೇನೆ. ಆ ಕುರಿತು ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುತ್ತೇನೆ. ಸದರಿ ತಕರಾರಿನ ಜೋತೆ ಪೋಟೋಗಳನ್ನು ಮಾತ್ರ ನೀಡಿರುತ್ತೇನೆ. ದಾವಾ ಆಸ್ತಿಯು ನನ್ನ ಮಾಲಿಕತ್ವಕ್ಕೆ ಸಂಬಂದಿಸಿರುವ ಕುರಿತು ಮತ್ತು ದಾವಾ ಶೆಡ್ಗಳನ್ನು ಬಾಡಿಗೆಗೆ ನೀಡಿರುವ ಕುರಿತು ದಾಖಲೆಗಳನ್ನು ಸಹ ನೀಡಿರುತ್ತೇನೆ. ಆ ರೀತಿ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

**3.** ದಿನಾಂಕ: 25.10.2021 ರಂದು 3 ನೇ ಪ್ರತಿವಾದಿಯು 4 ರಿಂದ 10 ನೇ ಪ್ರತಿವಾದಿಗಳಿಗೆ ಯೋಜನಾ ಭಾದಿತರು ಎಂದು ಪರಿಹಾರ ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಗಳಿಗೆ ಆಸ್ತಿಯ ಕುರಿತು ಯಾವುದೇ ಪರಿಹಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳ ಮಾಲಿಕತ್ವದ ಕುರಿತು ಯಾವುದೇ ದಾಖಲೆಗಳನ್ನು ನೀಡದ ಕಾರಣ 4 ರಿಂದ 10 ನೇ ಪ್ರತಿವಾದಿಗಳಿಗೆ ಪರಿಹಾರ ನೀಡಲಾಗಿದೆ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಪೂರ್ವದಲ್ಲಿ 4 ರಿಂದ 10 ನೇ ಪ್ರತಿವಾದಿಗಳಿಗೆ ಪರಿಹಾರ ನೀಡಿರುವ ಕುರಿತು ನನಗೆ ಗೊತ್ತಿರಲಿಲ್ಲ ಆದರೆ ಈ ದಾವೆ ಹೂಡಿದ ನಂತರ ತಿಳಿದಿರುತ್ತದೆ. ಸದರಿ ವಿಷಯ ತಿಳಿದ ನಂತರ ಸದರಿ ಪ್ರತಿವಾದಿಗ ವಿರುದ್ದ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಅರ್ಜಿಯನ್ನು ನೀಡಿರುತ್ತೇನೆ. ಆ ಕುರಿತು ಸದರಿ ಪ್ರತಿವಾದಿಗಳಿಂದ ಪರಿಹಾರ ಹಣ ಪಡೆಯಲು ನಾನು ಈ ದಾವೆಯಲ್ಲಿ ಯಾವುದೇ ಮಾಗಣಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

**4.** ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಕಾರಣ ಮತ್ತು ಸುಳ್ಳು ಪರಿಹಾರ ಪಡೆಯುವ ಕಾರಣ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ- 7 ಮತ್ತು 8 ರ ಪೋಟೋಗಳನ್ನು ಅಂಗಡಿಗಳು ಬಂದ್ ಮಾಡಿದ್ದ ಕಾಲಕ್ಕೆ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಸದರಿ

ಅಂಗಡಿಗಳನ್ನು ಭಾಡಿಗೆಗೆ ನೀಡಿದ್ದರೇ ನಾನು ಭಾಡಿಗೆದಾರರ ಜೊತೆ ಪೋಟೋ ತೆಗೆಸಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸರ್ಕಾರದ ಹಣವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.